ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಗಣಪತಿ ದೇವಸ್ಥಾನದಲ್ಲಿ ಗುರುತಾಗಿ, ನಿಕಟವಾದ ಗೆಳೆಯರೊಬ್ಬರ ಪೈಕಿಯ ಹುಡುಗಿ. ಬೆಂಗಳೂರಲ್ಲಿ ಹುಟ್ಟಿ ಬೆಳೆದವಳು. ಅಪ್ಪ ಖಾಸಗಿ ಹೈಸ್ಕೂಲಿನಲ್ಲಿ ಹೆಡ್ಮಾಸ್ಟರ್ ಆಗಿದ್ದಾರೆ. ಹೆಣ್ಣುಮಕ್ಕಳ ಪೈಕಿ ಇವಳು ದೊಡ್ಡವಳು, ಸವಿತಾ. ಇನ್ನೊಬ್ಬಳು ಚಿಕ್ಕವಳು, ಕನ್ನಿಕಾ. ಬಿ.ಎ. ಓದುತ್ತಿದ್ದಾಳೆ.

'ನಿಂಗೆ ಎಂಜಿನಿಯರ್ ಹುಡುಗೀನೇ ಬೇಕೇನೋ?' ಕೇಳಿದ್ದ ಶಿವರಾಮ

'ಹಂಗೇನಿಲ್ಲ ಅಪ್ಪಾ. ನಿಮ್ಮನ್ನ ಚೆನ್ನಾಗಿ ನೋಡ್ಕಳ್ಳೋ ಹುಡುಗಿ ಅಂತಾದ್ರೆ ಸಾಕು...'

'ನಮ್ಮನ್ನ ಅವಳ್ಯಾಕೆ ನೋಡ್ಕೋಬೇಕು? ನಮ್ಮನ್ನ ನಾವು ನೋಡ್ಕೊಳ್ಳೋವಷ್ಟು ಗಟ್ಟಿ ಇದೀವಿ. ನೀವಿಬ್ರೂ ಹೊಂದ್ಕಂಡು ಸುಖವಾಗಿದ್ರೆ ಅಷ್ಟು ಸಾಕು..'

ಮಗ ಸುಮುಖನಾಗಿ ಮಾತಾಡಿದ ಮೇಲೆ ಪ್ರಸ್ತಾಪ ಮುಂದುವರಿಯಿತು. ಜಾತಕ ಕೂಡಿ ಬಂತು. ಲಕ್ಷಣವಾಗಿದ್ದಳು ಸವಿತಾ. ಬಿ.ಎ. ಮಾಡಿಕೊಂಡಿದ್ದಳು. ಪರಸ್ಪರ ಒಪ್ಪಿಗೆಯಾದ ಮೇಲೆ ಮದುವೆಗೆ ಮತ್ಯಾವ ಅಡ್ಡಿ ಆತಂಕಗಳೂ ಎದುರಾಗದೆ ಬೆಂಗಳೂರಿನ ಕಲ್ಯಾಣ ಮಂಟಪವೊಂದರಲ್ಲಿ ಪ್ರಸನ್ನ ಮತ್ತು ಸವಿತಾ ಎನ್ನುವ ವಧೂವರರ ವಿವಾಹ ವಿಜೃಂಭಣೆಯಿಂದ ನೆರವೇರಿತು. ಶಿವರಾಮನ ಬಂಧುಮಿತ್ರರು, ಊರುಮನೆಯ ಆತ್ಮೀಯರು, ಮದುವೆಗೆ ಆಗಮಿಸಿ ಶಿವರಾಮನ ಸಂತಸವನ್ನು ಇಮ್ಮಡಿಗೊಳಿಸಿದರು. ಒಂದು ಮದುವೆಯ ಹೆಳೆಯಲ್ಲಿ ಬೆಂಗಳೂರುಪೇಟೆ ನೋಡುವ ಅವಕಾಶವನ್ನು ಹೆಚ್ಚಿನವರು ಸದುಪಯೋಗಪಡಿಸಿಕೊಂಡಿದ್ದರು.

ಹೊಸ ಮದುವಣಗಿತ್ತಿ ಮನೆ ತುಂಬಿದ ಮೇಲೆ ಸೀತಾಲಕ್ಷ್ಮಿಗೆ ಬಿಡುಗಡೆಯ ಭಾವ. ತಮ್ಮ ಕರ್ತವ್ಯ ಮುಗಿಯಿತು ಎನ್ನುವ ನಿರಾಳ. ಜಮೀನು ಮಾರಿದ ದುಡ್ಡಿನಲ್ಲಿ ಮಗನ ಪಾಲಿನದನ್ನು ಸಲ್ಲಿಸಿದ ಶಿವರಾಮ ಒಡವೆಗಳ ವಿಷಯದಲ್ಲೂ ಅನ್ಯಾಯ ಮಾಡಲಿಲ್ಲ. ಹಳೆಗಾಲದ ಕೆಲವು ಒಡವೆಗಳನ್ನು, ಸೊಸೆಗೆ ಕೊಡಬೇಕು ಅನ್ನಿಸಿದುದನ್ನು ಮಗನ ಜೊತೆ ಹೋಗಿ ಲಾಕರಿನಿಂದ ಮನೆಗೆ ತಂದಿದ್ದ. ನಿಲುವಾಭರಣಗಳಿಂದ ಎನ್ನುವಂತೆ ಅಲಂಕೃತಳಾಗಿದ್ದ ನವವಧುವನ್ನು ಕಂಡರೆ ವೆಂಕಟರಾಮು ಆಭರಣಗಳ ಗುರುತು ಹಿಡಿಯದೆ ಇರುತ್ತಿರಲಿಲ್ಲ ಎನ್ನುವ ನೆನವರಿಕೆಯಿಂದ ಮನಸ್ಸು ಕೊಂಚ ಹುಳ್ಳಗಾಗಿದ್ದು ಹೌದು. ಆದರೆ ಅದು ಕ್ಷಣಿಕ.

***

ಸವಿತಾ ತೀರಾ ಇದ್ದುಳ್ಳವರ ಮನೆಯ ಹುಡುಗಿಯೇನಲ್ಲದಿದ್ದರೂ ಮಹತ್ವಾಕಾಂಕ್ಷೆಯ ಹುಡುಗಿ. ಗಂಡನ ಮನೆಯ ಸಿರಿವಂತಿಕೆಯನ್ನು ನೆಂಟರಿಷ್ಟರ ಎದುರು, ವಾರಿಗೆಯ ಗೆಳತಿಯರ ಎದುರು ಪ್ರದರ್ಶಿಸಿ ಮೆರೆದಾಡಬೇಕೆಂಬುದು ಅವಳ ವಯೋಸಹಜ ಆಸೆ. ಹೊಕ್ಕ ಮನೆಗೆ ಹಳಬಳಾಗುತ್ತಿದ್ದಂತೆ ಅವಳ ಒಂದೊಂದೇ ಬಯಕೆಗಳು ಕಾರ್ಯಗತವಾಗುತ್ತಾ ಬಂದುವು. ಮನೆಗೆ ದುಬಾರಿಯ ಸೋಫಾ, ಊಟದ ಮೇಜು, ದೊಡ್ಡ ಸ್ಕ್ರೀನಿನ ಟೀವಿ, ನೆಲಕ್ಕೆ ಕಾರ್ಪೆಟ್ಟು, ಬಂದವರಿಗೆ ಕಾಫಿ, ತಿಂಡಿ ಸರಬರಾಜು ಮಾಡಲು ಆಧುನಿಕ ಪರಿಕರಗಳು, ಸೊಸೆ ನೀರಿನಂತೆ ಹಣ ಖರ್ಚು ಮಾಡುತ್ತಿದ್ದಾಳೆಂದು ಶಿವರಾಮನಿಗೆ ಆತಂಕ. ಮನೆಯ ಸಾಲವನ್ನು ಬೇಗ ಬೇಗ ತೀರಿಸುವ ದಾರಿ ಹುಡುಕಿಕೊಳ್ಳಬೇಕೇ ವಿನಾ ಖರ್ಚು ಹೆಚ್ಚಿಸಿಕೊಳ್ಳುತ್ತಾ ಹೋಗುವುದು ಸಂಸಾರ ಮಾಡುವ ಲಕ್ಷಣವೇ? ಆಡುವಂತಿಲ್ಲ, ಅನುಭವಿಸುವಂತಿಲ್ಲ. ನಾದಿನಿಯನ್ನು ಎದುರು ಹಾಕಿಕೊಂಡಿದ್ದು ಶಿವರಾಮನ ಮನಸ್ಸಿನಲ್ಲಿ ಹಸಿ ಹಸಿಯಾಗಿತ್ತು. ಅವಳು ನಾದಿನಿ. ಇವಳು ಸೊಸೆ. ಅವಳನ್ನು ಎದುರು ಹಾಕಿಕೊಂಡರೆ ನಡೆದೀತು, ಇವಳನ್ನು?

ತಾನು ಮೆತ್ತಗಾಗುತ್ತಿದ್ದೇನೆಂದು ಸ್ವತಾ ಶಿವರಾಮನಿಗೇ ಅನಿಸುತ್ತಿತ್ತು. ಈ ಅಸಮಾಧಾನಕ್ಕೆ ನೇರವಾಗಿ ಗುರಿಯಾಗುತ್ತಿದ್ದವಳು ಸೀತಾಲಕ್ಷ್ಮಿ. ಒಂದಷ್ಟು ಕಾಲ ಹಾದಿಗೆ ಬಂದವನಂತಿದ್ದ ಗಂಡ ಮರಳಿ ಮುನ್ನಿನಂತಾಗತೊಡಗಿದ್ದ. ಎಲ್ಲಾ ಎಷ್ಟು ಸಣ್ಣ ಸಣ್ಣ ವಿಷಯಗಳು. ಮನೆ ಮನೆಯ ಕತೆಗಳು. ಆದರೆ ಪರಸ್ಪರರಲ್ಲಿ ವೈಮನಸ್ಯ ಹುಟ್ಟು ಹಾಕುವುದರಲ್ಲಿ ಪ್ರಮುಖ ಪಾತ್ರ ವಹಿಸುವಂಥವು. ಇಲ್ಲದಿದ್ದರೆ ಚಟ್ನಿಗೆ ಒಗ್ಗರಣೆ ಹಾಕುವಂತಹ ಕ್ಷುಲ್ಲಕ ವಿಷಯ ಕೂಡಾ ಮಾತಿನ ಚಕಮಕಿಗೆ ಕಾರಣವಾಗಲು ಸಾಧ್ಯವೇ?

'ಚಟ್ನಿಗೆ ಒಗ್ಗರಣೆ ಹಾಕ್ಬೇಕು ಅಂತ ಮರೆತೇ ಹೋಯ್ತಾ? ಇಷ್ಟೊರ್ಷ ಅಡುಗೆ ಮಾಡಿದ್ದು ದಂಡಕ್ಕೆ' ಅಂದಿದ್ದ ಶಿವರಾಮ, ಉಪಾಹಾರದ ಟೇಬಲ್ಲಿನ ಎದುರು ಇಡ್ಲಿಯ ಜೊತೆ ಬಡಿಸಿದ್ದ ಚಟ್ನಿಯನ್ನು ಪರಿಶೀಲಿಸುತ್ತಾ. ಜೋನಿಬೆಲ್ಲದೊಂದಿಗೆ ತಿಂಡಿ ತಿನ್ನುತ್ತಿದ್ದ ಕಾಲ ಹಿಂದೆ ಹೋಗಿತ್ತು. ಪೇಟೆಮನೆ ಸೇರಿಕೊಂಡ ಮೇಲೆ ಅಲ್ಲಿನ ರೀತಿ ನೀತಿಗಳ ಪ್ರಭಾವ ಮನೆ ಹೊಕ್ಕಿತ್ತು. ಬೇಕು ಅಂದಕೂಡಲೆ ಜೋನಿಬೆಲ್ಲ ಸಿಗುತ್ತಲೂ ಇರಲಿಲ್ಲ.

'ಚಟ್ನಿ ಮಾಡಿದ್ದು ನಾನು ಮಾವ, ಅತ್ತೆ ಅಲ್ಲ...' ಅಂದಿದ್ದು ಸೊಸೆ. ಅಷ್ಟಕ್ಕೆ ಮುಗಿಸಬಹುದಿತ್ತು.

'ಆರೋಗ್ಯವಾಗಿರ್ಬೇಕು ಅಂದ್ರೆ ಬಾಯಿರುಚಿ ಸ್ವಲ್ಪ ಕಡಿಮೆ ಮಾಡ್ಕೋಬೇಕು. ವಯಸ್ಸಾದವರು ಎಣ್ಣೆ ಕಮ್ಮಿ ತಿಂದಷ್ಟೂ ಒಳ್ಳೇದು...' ಕೊಸರು ಸೇರಿಸಿದ್ದಳು.

ವಾರಗಿತ್ತಿ ಕನಕನ ನೆನಪಾಗಿ ಇನ್ನೇನು ಗಂಡ ಸ್ಫೋಟಗೊಳ್ಳುತ್ತಾನೆಂದು ಸೀತಾಲಕ್ಷ್ಮಿಯ ಕಾಲುಗಳು ನಡುಗತೊಡಗಿದರೆ ಹಾಗೇನಾಗಲಿಲ್ಲ. ಇಡ್ಲಿಯೊಡನೆ ಅಸಮಾಧಾನವನ್ನೂ ನುಂಗಿಕೊಂಡಿದ್ದ ಶಿವರಾಮ. ಮನೆಯ ತೋಟದಲ್ಲಿ ಬಿಡುತ್ತಿದ್ದ ಕರಿಬಾಳೆ ಗೊನೆ ಹಣ್ಣಾದಾಗ ದೊಗೆದು ದೊಗೆದು ತುಪ್ಪ, ಸಕ್ಕರೆ ಹಾಕಿಕೊಂಡು ತಿಂದು ಜೀರ್ಣಿಸಿಕೊಂಡ ಜೀವ ಇದು. ಇಡ್ಲಿಯ ಜೊತೆ ಹಸನಾದ ಬೆಣ್ಣೆ ಇಲ್ಲದಿದ್ದರೆ ತಿಂಡಿ ಗಂಟಲಲ್ಲಿ ಇಳಿಯುತ್ತಿರಲಿಲ್ಲ. ಈಗ ಆರೋಗ್ಯದ ಪಾಠ ಹೇಳಿಕೊಡುತ್ತಿದ್ದಾಳೆ ಸೊಸೆ. ಎಷ್ಟೆಲ್ಲಾ ಹೊಂದಾಣಿಕೆಗಳು. ಏನೆಲ್ಲಾ ಕಟ್ಟುನಿಟ್ಟುಗಳು. ಮಾವ ತಂಬಾಕಿನ ಜೊತೆ ಎಲೆ ಅಡಿಕೆ ಅಗಿಯುವುದು ಸೊಸೆಗೆ ಪಥ್ಯವಾಗುತ್ತಿರಲಿಲ್ಲ. ಫಳಗುಟ್ಟಿ ಹೊಳೆಯಬೇಕಾದ ಸಿಂಕನ್ನು ಉಗಿದುಗಿದು ಕೆಂಬಣ್ಣ ಮಾಡಿಡುತ್ತಾರೆ ಎಂದು ದೂರು. ಸೋಫಾದ ಮೇಲೆ ಕಾಲು ಮಡಿಸಿಕೊಂಡು ಕೂರುತ್ತಾರೆ. ಬಚ್ಚಲಿಗೆ ಹೋದರೆ ಸರಿಯಾಗಿ ನೀರು ಹಾಕದೆ ಉಚ್ಚೆ ವಾಸನೆ. ಸ್ನಾನ ಮಾಡಿ ಬಂದ ಒದ್ದೆ ಟವೆಲ್ಲನ್ನು ಎಲ್ಲೆಂದರಲ್ಲಿ ಹರಗುತ್ತಾರೆ. ವಯಸ್ಸಾದವರು ಇರುವ ಮನೆಯಲ್ಲಿ ಸರ್ವೇಸಾಮಾನ್ಯವಾಗಿ ಕೇಳಿ ಬರುವಂಥ ಅಸಹನೆಯ ಮಾತುಗಳು ಇವರ ಮನೆಯಲ್ಲಿ ಪುನರಾವರ್ತನೆಯಾಗತೊಡಗಿದುವು. ಸೀತಾಲಕ್ಷ್ಮಿ ಕೂಡಾ ಮೂಲೆಗೆ ಸೇರುವಂತಾಗಿದ್ದಳು. ಸೊಸೆ ಅಡುಗೆ ಮನೆಗೆ ತಂದು ತಂದು ತುಂಬಿಕೊಂಡ ಅತ್ಯಾಧುನಿಕ ಉಪಕರಣಗಳನ್ನು ಉಪಯೋಗಿಸುವ ತಲೆ, ಬುಡ ಅವಳಿಗೆ ತಿಳಿದಿರಲಿಲ್ಲ. ಹೇಳಿಕೊಟ್ಟರೆ ಕಲಿಯಬಹುದಿತ್ತೇನೋ. ಅಥವಾ ಆ ಬುದ್ಧಿ, ಉಮೇದು ಇರಲಿಲ್ಲವಾ? ಸೊಸೆಯ ಗೆಳತಿಯರು ಮನೆಗೆ ಬಂದಾಗ ಅತ್ತೆಯೋ, ಮಾವನೋ ಅವರೆಲ್ಲರ ಆಪ್ತ ಸಂಭಾಷಣೆಗೆ ಕಿವಿಯಾಗುತ್ತಾ ಅಲ್ಲಿ ಕೂತಿರುವುದು ಸವಿತಳಿಗೆ ಇಷ್ಟವಾಗುತ್ತಿರಲಿಲ್ಲ ಎನ್ನುವುದು ಅವಳ ಹಾವಭಾವಗಳಿಂದಲೇ ಅರ್ಥ ಮಾಡಿಕೊಳ್ಳಬಹುದಿತ್ತು. ಎಲ್ಲಕ್ಕಿಂತ ಶಿವರಾಮನಿಗೆ ಬಿಸಿ ಮುಟ್ಟಿಸಿದ ವಿಚಾರ ಅಂದರೆ ಮನೆಗೆ ಕಾರು ಬಂದಿದ್ದು. ಅಪ್ಪನಿಗೆ ಸುಳು ಸೂಕ್ಷ್ಮ ಕೊಡದೆ ಮಗ ಮಾಡಿದ ಮೊದಲ ವ್ಯವಹಾರ. ಮಗ ಕೂಡಾ ಸಸಾರ ಮಾಡುವುದಕ್ಕೆ ಶುರು ಮಾಡಿದನಾ?

'ಯಾಕೆ ಬೇಕಿತ್ತೋ ಕಾರು? ಮನೆ ಸಾಲ ತೀರೋವರೆಗೆ ಹಾಳು ಖರ್ಚಿಗೆ ಕಡಿವಾಣ ಹಾಕಿ ಅಂದ್ರೆ ನಿಮ್ಮ ಕಿವಿಗೇ ಬೀಳಲ್ಲ' ಸೊಸೆ ಎದುರಿಗಿಲ್ಲದ ಸಮಯ ಸಾಧಿಸಿ ಈ ಮಾತು ಹೇಳಬೇಕಿತ್ತೇ? ಅಷ್ಟೊಂದು ಹಿಂಜರಿಕೆ ಶುರುವಾಗಿದೆಯೇ?

'ಇರ್ಲಿ ಬಿಡು ಅಪ್ಪಾ. ನಿನ್ನ ಸೊಸೆಗೆ ಡ್ರೈವಿಂಗ್ ಕಲೀಬೇಕಂತೆ. ಯಾವಾಗಂದ್ರೆ ಆವಾಗ ತೌರುಮನೆಗೆ ಹೋಗೋಕೆ ಅನುಕೂಲ ಆಗುತ್ತಲ್ಲ' ತಮಾಷಿಯಾಗಿ ಎಂಬಂತೆ ಹೇಳಿದ್ದ ಪ್ರಸನ್ನ.

ಹೇಳಿದಂತೆ ಡ್ರೈವಿಂಗ್ ಕಲಿತ ಸೊಸೆ ಯಾವಾಗೆಂದರೆ ಆವಾಗ ತೌರುಮನೆಗೆ ಎದ್ದುಬಿಡುತ್ತಿದ್ದಳು. ಅಲ್ಲಿಯವರು ಇಲ್ಲಿಗೆ ಬರುವುದಕ್ಕೂ ಸಮಯ, ಸಂದರ್ಭಗಳ ಅವಶ್ಯಕತೆ ಇರಲಿಲ್ಲ. ಯಾವ ಮನೆಯಲ್ಲಿ ತಾವು ನಿಶ್ಚಿಂತೆಯಿಂದ ಓಡಾಡಿಕೊಂಡಿರಬೇಕಿತ್ತೋ ಆ ಮನೆಯಲ್ಲಿ ಮತ್ಯಾರೋ ಅನ್ಯರು ಹಕ್ಕು ಸ್ಥಾಪಿಸುತ್ತಿದ್ದಾರೆ. ಬಿಡುಬೀಸಾಗಿ ಓಡಾಡಿಕೊಂಡಿದ್ದಾರೆ. ತಾವು ಈ ಮನೆಗೆ ಪರಕೀಯರಾಗತೊಡಗಿದ್ದೇವೆ ಎನ್ನುವ ಭಾವನೆ ಬೇಡವೆಂದರೂ ಮನಸ್ಸಿಗೆ ಬರುತ್ತಿತ್ತು ಸೀತಾಲಕ್ಷ್ಮಿಗೆ. ಅಮ್ಮ, ಮಗಳು ಅಡುಗೆ ಮನೆಯಲ್ಲಿ ಸೇರಿಕೊಂಡರೆ ಬೇಕಾದ್ದನ್ನು ಮಾಡುತ್ತಾರೆ. ಸೀತಾಲಕ್ಷ್ಮಿಗೆ ಹೆಸರು ಹೇಳುವುದಕ್ಕೂ ಬರದ ತಿಂಡಿ ತೀರ್ಥಗಳು ತಯಾರಾಗುತ್ತವೆ. ಅಲ್ಲಿಗೆ ಹೋಗಿ ಆಸಕ್ತಿಯಿಂದ ನೋಡುತ್ತಾ ನಿಲ್ಲುವುದಕ್ಕೆ ಏನೋ ಅಳುಕು. ಅವರವರ ಕಲಕಲ ಮಾತಿನಲ್ಲಿ, ಕಿಲಕಿಲ ನಗೆಯಲ್ಲಿ ತಾನು ಅನ್ಯಳೆನಿಸುವ ಭಾವನೆ. ಗಂಡನಿಗೂ ಹೀಗೇನೋ ಅನಿಸುತ್ತದೆಯೆಂದು